Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/28/2020-21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಿಭಾಗ
ವಿ. ನಾಗೇನಹಳ್ಳಿ, ವಾರ್ಡ್ ನಂ:22
ಬೆಂಗಳೂರು-560032
ದಿನಾಂಕ:15-05-2021.

## ದಿನಾಂಕ: 15-05-2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-

ಸಭೆಗೆ ಹಾಜರಿದ್ದವರು:

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ವಿನೋದ್, ಕಂದಾಯ ವಸೂಲಿಗಾರು
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರೀವೀಕ್ಷಕರು, ಘನತ್ಯಾಜ್ಯ

ವಾರ್ಡ್ ಸಮತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ರಾಮಕೃಷ್ಣರೆಡ್ಡಿ, ನೋಡೆಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ; 03-04-2021 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 +ve ಕೇಸ್ ಗಳು ಹೆಚ್ಚಾಗುತ್ತಿರುವುದರಿಂದ ವಾರ್ಡ್ ನಲ್ಲಿ ಹೆಚ್ಚುವರಿ ಬೇಡ್ ಗಳ ವ್ಯವಸ್ಥೆ ಮಾಡುವ ಬಗ್ಗೆ ಹಾಗೂ ಸಿ.ಸಿ.ಸಿ (ಕೋವಿಡ್ ಕೇರ್ ಸೆಂಟರ್) ಮತ್ತು ವ್ಯಾಕ್ಸಿನೇಶನ್ ಗಳ ಬಗ್ಗೆ ನೋಡೆಲ್ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತ್ತು. ಹಾಗೂ ಅಕ್ಟೋಬರ್ ತಿಂಗಳವರೆಗೆ 45 ವರ್ಷ ಮೇಲ್ಪಟ್ಟ ಜನರಿಗೆ ಮೊದಲ ಹಾಗೂ ಎರಡನೇ ಡೋಸ್ ವ್ಯಾಕ್ಸಿನೇಶನ್ ಗಳನ್ನು ಕೋಡುವುದಾಗಿ ತಿಳಿಸಿದರು.
- ವಿ. ನಾಗೇನಹಳ್ಳಿ ವಾರ್ಡ್ ವ್ಯಾಪ್ತಿಯ ಮುಖ್ಯ ಹಾಗೂ ಅಡ್ಡರಸ್ತೆಗಳಲ್ಲಿ ಘನತ್ಯಾಜ್ಯ ಇಲಾಖೆಯವರಿಂದ ಕಸ ವಿಲೇವಾರಿ ಮಾಡುವ ಬಗ್ಗೆ ಚರ್ಚಿಸಲಾಯಿತ್ತು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಖಾತಾ ವರ್ಗಾವಣೆ, ಖಾತಾ ನೋಂದಣಿ, ತೆರಿಗೆ ಹಣ ಪಾವತಿ, ಹೊಸದಾಗಿ ಚುನಾವಣೆ ಗುರುತೀನ ಚೀಟಿ ಮಾಡುವ ಬಗ್ಗೆ ಹಾಗೂ ಇನ್ನಿತರ ಕಂದಾಯ ಪಾವತಿಗಳ ಬಗ್ಗೆ ಸಭೆಗೆ ಹಾಜರಿದ್ದ ಕಂದಾಯ ಇಲಾಖೆಯರೊಂದಿಗೆ ಹೆಚ್ಚಿನ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತ್ತು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯಲ್ಲಿ ಅಡ್ಡಮೋರಿಗೆ ಸಂಬಂಧಿಸಿದ ಉಳಿದ ಎಲ್ಲಾ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ಶ್ರೀ ಪ್ರಸನ್ನ ಕುಮಾರ್ (ಗುತ್ತಿಗೆ ದಾರರು) ರವರಿಗೆ ದೂರವಾಣಿ ಮೂಲಕ ತಿಳಿಸಿದರು.
- ಸಭೆಯಲ್ಲಿ ನೋಡೆಲ್ ಅಧಿಕಾರೊಗಳು ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳನ್ನು ಬಿದ್ದಿರುವುದರಿಂದ ತಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಗುಂಡಿಗಳನ್ನು ತುಂಬಲು ಸಭೆಗೆ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. ಶೀಘ್ರವಾಗಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮಗೈಗೊಳ್ಳುವ ಬಗ್ಗೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, Bescom ಇಲಾಖೆ, BWSSB ಇಲಾಖೆ ಮತ್ತು Traffic ಪೋಲೀಸ್ ಇಲಾಖೆಯವರು ಮುಂದಿನ ಸಭೆಯಲ್ಲಿ ತಪ್ಪದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ನೋಟೀಸ್ ಅನ್ನು ನೀಡುವಂತೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ ಕ್ರಾಸ್ ರಸ್ತೆಯ ಬದಿಯಲ್ಲಿ ಶ್ರೀ ಕ್ಲಸ್ಟರ್ ಎಂಬುವವರು ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ತಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ತಮಗೆ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ನೋಟೀಸ್ ಅನ್ನು ಜಾರಿಗೊಳಿಸಲಾಗಿದ್ದು, ಹಾಗೂ ಈಗಾಗಲೇ ಮೇಲಾಧಿಕಾರಿಗಳಿಂದ ಶೆಡ್ ಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ವಿ. ನಾಗೇನಹಳ್ಳಿಯ ರಸ್ತೆಗಳಲ್ಲಿ Poth holesಗಳನ್ನು ತುಂಬಲು ಪೂರ್ವವಲಯದ EE ರವರಿಗೆ ಪತ್ರ ಬರೆಯುವಂತೆ ತಿಳಿಸಿದರು.

- ವಾರ್ಡಿನಲ್ಲಿ ಕೋವಿಡ್-19 +ve ಕೇಸ್ ಗಳು ಹೆಚ್ಚಾಗಿರುವುದರಿಂಧ ಅದಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುತ್ತೀರುವ ಬಗ್ಗೆ ಚರ್ಚಿಸಲಾಯಿತ್ತು.
- ವಾರ್ಡ್ ನ ವ್ಯಾಪ್ತಿಯಲ್ಲಿ ಬರುವ ಕೆಲವು ಅಡ್ಡರಸ್ತೆ ಹಾಗೂ ಮುಖ್ಯರಸ್ತೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.
- ವಾರ್ಡ್ ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಮಶಾನಗಳ ಬಗ್ಗೆ ನೋಡೆಲ್ ಅಧಿಕಾರಿಗಳ ಜೊತೆ ಚರ್ಚಿಸಲಾಯಿತ್ತು. ಹಾಗೂ ವಾರ್ಡಿನಲ್ಲಿ ಕೋವಿಡ್-19 +ve ನಿಂದ ಮೃತಪಟ್ಟವರನ್ನು ಪಿ.ಪಿ.ಟಿ ಕೀಟ್ ಗಳನ್ನು ಧರಿಸಿ ಸುರಕ್ಷಿತವಾಗಿ ಶವಸಂಸ್ಕಾರವನ್ನು ನೆರವೇರಿಸಲಾಗುತ್ತಿದೆ ಎಂದು ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳು ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 12:45ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಶ್ರೀ. ರಾಮಕೃಷ್ಣರೆಡ್ಡಿ) | (ಗುರುಸಿದ್ದಪ್ಪ .ಜಿ) |
| ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಕಾರ್ಯದರ್ಶಿ |
| ಹಾಗೂ | ಹಾಗೂ |
| ವಾರ್ಡ್ ಸಮಿತಿ ಅಧ್ಯಕ್ಷರು | ಸಹಾಯಕ ಅಭಿಯಂತರರು ವಾರ್ಡ್ ನಂ:22 |

NODAL OFFICER
WARD NO : 22
BBMP